ಬೇಸರಪಟ್ಟುಕೊಂಡಿದ್ದರು. ಎಲ್ಲಾ ಬಿಟ್ಟು ಮಹಾತ್ಮ ಗಾಂಧಿ ರಸ್ತೆಯಲ್ಲಿ ಈ ನಿಷೇಧ ಫಲಕ! ರಾಷ್ಟ್ರಪಿತನ ಆತ್ಮ ವಿಲವಿಲಿಸುತ್ತಿರಬೇಕು. ಈ ಫಲಕಗಳಿಗೂ – 'ಭಾರತೀಯರಿಗೆ, ನಾಯಿಗಳಿಗೆ, ಕರಿಯರಿಗೆ ಪ್ರವೇಶವಿಲ್ಲ' ಎಂಬ ಯೂರೋಪಿಯನ್ ಕ್ಲಬ್ಬಿನ ಬೋರ್ಡುಗಳಿಗೂ ಏನಾದರೂ ಭೇದವಿದೆಯೇ? ಯಾರಿಗೂ ಹಾನಿಯೆಸಗದೆ ಚಲಿಸುವ ವಾಹನಕ್ಕೆ ನೂರುತಡೆ; ಹೊಗೆ ಕಕ್ಕುವ ವಾಹನಗಳಿಗೆ ಮರ್ಯಾದೆ. ಆದರೆ ನಿಸರ್ಗದ ನ್ಯಾಯವೊಂದಿದೆ. ತಮ್ಮ ಹೊಗೆಯಿಂದ ತಾವೇ ಉಸಿರು ಕಟ್ಟಿಸಿಕೊಂಡಿರುವ ಮಹಾನಗರಗಳು ಒಂದು ದಿನ ಸೈಕಲ್ಲಿಗೆ ಮರಳಲೇಬೇಕು.

ಯಾರೆಷ್ಟೇ ತುಚ್ಛೀಕರಿಸಲಿ, ಭಾರತದ ಬೀದಿಗಳಿಂದ ಸೈಕಲುಗಳನ್ನು ಹೊರತಳ್ಳಲು ಸಾಧ್ಯವಿಲ್ಲ. ಅವು ನಾಡಿನ ಜೀವನಾಡಿಗಳು. ಒಂದು ಕಾಲಕ್ಕೆ ಭದ್ರಾವತಿಯಲ್ಲಿ ಕಬ್ಬಿಣದ ಕಾರಖಾನೆ ಶಿಫ್ಟ್ ಬಿಟ್ಟಾಗ ಸೈಕಲ್ ಪ್ರವಾಹವೇ ರಸ್ತೆಯ ಮೇಲೆ ಬರುತ್ತಿತ್ತು. ಈಗಲೂ ತರಕಾರಿ ಹಣ್ಣು ತುಂಬಿದ ಬುಟ್ಟಿಗಳನ್ನು ಕ್ಯಾರಿಯರಿಗೆ ಕಟ್ಟಿಕೊಂಡು ವ್ಯಾಪಾರ ಮಾಡುವವರು ಎಷ್ಟೊಂದು ಜನ? ಹಾಲು, ಮೀನು, ಮಂಡಕ್ಕಿ ಮಾರುವವರನ್ನು ಸೈಕಲಿಲ್ಲದೆ ಕಲ್ಪಿಸಿಕೊಳ್ಳಲಾಗದು. ಹಳೇಪೇಪರ್, ಬಾಟ್ಲಿ ಕೊಳ್ಳುವವನ ವಾಹನ ಯಾವಾಗಲೂ ಗುಜರಿಯಿಂದ ಎದ್ದು ಬಂದ ಸೈಕಲ್ಲೇ. ನಮ್ಮೂರಿನಲ್ಲಿ ನಾನು ಮೊದಲು ಕಂಡ ಸೈಕಲ್ ಬಟ್ಟೆ ಮಾರಲು ಬರುತ್ತಿದ್ದ ಮಂಗಳೂರು ಕಡೆಯ ಬ್ಯಾರಿಗಳದ್ದು; ನಂತರ ಬೀಟ್‌ಪೊಲೀಸರು, ಅಂಚೆಯವರು, ಡಾಕ್ಟರರು ಅದನ್ನು ನಡೆಸುವುದನ್ನು ನೋಡಿದೆವು. ಡಾಕ್ಟರುಗಳು, ರೋಗಿ ತೀರ ಸುಸ್ತಾಗಿದ್ದಾಗ ಸೈಕಲ್ ಹಾಕಿಕೊಂಡು ಮನೆಗೆ ಬಂದು ನೋಡುತ್ತಿದ್ದರು. ಮುಂದೆ ಸೈಕಲ್ಲು ಮುಂದೆ ಜಂಗಲಿನಿಂದ ತೇಗದ ಮರ, ಹಸಿಬಿದಿರು, ಕಟ್ಟಿಗೆ ತರುವವರಿಗೆ ಚಕ್ಕಡಿಯಾಗುವುದನ್ನು ಕಂಡೆವು. ಬಹುಶಃ ಎಲ್ಲ ಬಡದೇಶಗಳಲ್ಲೂ ಸೈಕಲ್ಲು ದುಡಿವವರ್ಗದ ಸಂಗಾತಿ.

ಲೋಕಪ್ರಸಿದ್ಧ 'ಬೈಸಿಕಲ್ ಥೀವ್ಸ್' ಸಿನಿಮಾ ನೆನಪಾಗುತ್ತಿದೆ. ಎರಡನೇ ಮಹಾಯುದ್ಧದಲ್ಲಿ ಕಂಗೆಟ್ಟ ಇಟಲಿಯ ದಾರುಣ ಕತೆಯಿದು. ಕತೆಯ ನಾಯಕ ವಾಲ್‌ಪೋಸ್ಟರು ಹಚ್ಚುವ ನೌಕರಿಗೆ ಅರ್ಜಿ ಹಾಕಿರುತ್ತಾನೆ. ಸೈಕಲ್ ಇರುವವರಿಗೆ ಮಾತ್ರ ಸಿಗುವ ನೌಕರಿಯದು. ಕೂಡಲೇ ಅವನ ಹೆಂಡತಿ ಮನೆಯಲ್ಲಿದ್ದ ಬಳಕೆಯ ವಸ್ತುಗಳನ್ನೆಲ್ಲ ಮಾರಿ ಸೈಕಲ್ ಕೊಡಿಸುವಳು. ಆದರೆ ಅದು ನೌಕರಿಯ ಮೊದಲ ದಿನವೇ ಕಳ್ಳತನವಾಗುತ್ತದೆ. ಕಳೆದುಹೋದ ವಾಹನವನ್ನು ಮಹಾನಗರದಲ್ಲಿ ಕಥಾನಾಯಕ ಪುಟ್ಟಮಗನ ಜತೆಗೂಡಿ ಹುಡುಕುವುದರ ಸುತ್ತ ಸಿನಿಮಾ ಬೆಳೆಯುತ್ತದೆ. ಭಗ್ನಗೊಂಡ ಬದುಕಿನಲ್ಲಿ ಹೊಸಕನಸು ಚಿಗುರೊಡೆಯಲು ಕಾರಣವಾಗಿದ್ದ ವಾಹನ ಕಡೆಗೂ ಸಿಗುವುದಿಲ್ಲ. ಕೊನೆಗೆ ಹತಾಶೆಯಿಂದ ನಾಯಕ, ಬೇರೊಬ್ಬರ ಸೈಕಲ್ ಕದಿಯಲು ಹೋಗಿ ಸಿಕ್ಕಿಬೀಳುತ್ತಾನೆ. ಜನರಿಂದ ಛೀ ಅನಿಸಿಕೊಂಡು ಆತ ಬಿಕ್ಕಿ ಅಳುವ ಕೊನೆಯ ದೃಶ್ಯ ನೋಡುಗರ ಎದೆಕರಗಿಸುತ್ತದೆ. ಚಲಿಸಲಾರಂಭಿಸಿದ ಅವನ ಬಾಳಚಕ್ರ ಇದ್ದಕ್ಕಿದ್ದಂತೆ ನಿಂತುಹೋಗುತ್ತದೆ. ಆದರೆ ಗತಿಗೆಟ್ಟ ಅವಸ್ಥೆಯಿಂದಲೇ ಕಳ್ಳನಾದವನ ಬದುಕಲ್ಲಿ ಸೈಕಲ್ ಬೇರೊಂದು ಚಲನೆ ಆರಂಭಿಸುತ್ತದೆ.

ಮಾನವರ ಅಮೂಲ್ಯ ಸಂಶೋಧನೆಗಳಲ್ಲಿ ಭಾಷೆ, ಬೆಂಕಿ, ಚಕ್ರ ಮುಖ್ಯವಾದವು ಎನ್ನುತ್ತಾರೆ. ಇದರಲ್ಲಿ ಚಕ್ರದ ಸಾರ್ಥಕ ಬಳಕೆಯಾಗಿದ್ದು ಸೈಕಲ್ಲಿನಲ್ಲೇ ಇರಬೇಕು. ಇದನ್ನು ರೂಪಿಸಿದವರು ಮಾನವ ಬಾಳಿನಲ್ಲಿ ಕೋಲಾಹಲಕ್ಕೆ ಕಾರಣವಾದೀತೆಂದು ಊಹಿಸಿರಲಿಕ್ಕಿಲ್ಲ. ಇದು ಒಬ್ಬ ವಿಜ್ಞಾನಿಯ ಸೃಷ್ಟಿಯಲ್ಲ. ಇದರ ಪ್ರಥಮ ಹೊಳಹು ಇಟಲಿಯ ಕಲಾವಿದನೊಬ್ಬನ ತಲೆಯಲ್ಲಿ ಮೂಡುತ್ತದೆ; ಈ ಕಲ್ಪನೆಯ ಭ್ರೂಣವನ್ನು ಒಬ್ಬ ಫ್ರೆಂಚನು ಅಭಿವೃದ್ಧಿಪಡಿಸಿ ದೊರೆಯ